



## ಮರದ ಮಣಿಹಾರ

ಮರದಿಂದ ಮಾಡಿದ ಬೀಡ್ಸ್ ಗಳನ್ನು ನಮಗೆ ಬೇಕಾದ ರೀತಿಯಲ್ಲಿ ನೆಕ್ಲೇಸ್ ಮಾಡಿ ಧರಿಸಬಹುದು. ಸಾಕಷ್ಟು ವೈವಿಧ್ಯಗಳಲ್ಲಿ ಸಿಗುವ ಈ ಮಣಿಹಾರಗಳನ್ನು ಬಟ್ಟೆಗೆ ಮ್ಯಾಚ್ ಮಾಡಿಕೊಂಡರೆ ಸಖತ್ ಲುಕ್ ಕೊಡುತ್ತದೆ. ಮರದ ತುಂಡಿನಿಂದ ತಯಾರಿಸಿದ ಕ್ಲಿಪ್‌ಗಳು, ಹೇರ್‌ಪಿನ್‌ಗಳು ಸಹ ಟ್ರೆಂಡಿಯಾಗಿವೆ. ಈ ಹೇರ್ ಪಿನ್‌ಗಳನ್ನು ಪೋನಿಟೈಲ್ ಕಟ್ಟಲೂ ಬಳಸಬಹುದು.







ಜನಾಂಗದ ಮಹಿಳೆಯರು ಮರದ ತುಂಡುಗಳಿಂದ ತಯಾರಿಸಲಾದ ಮುತ್ತುಗಳನ್ನು ಪೋಣಿಸಿ ಸರ, ಬಳೆ, ಕಿವಿಯೋಲೆ ಹೀಗೆ ನಾನಾ ತರಹದ ಆಭರಣಗಳನ್ನು ಸ್ವತಃ ತಾವೇ ತಯಾರಿಸಿ ಧರಿಸುತ್ತಿದ್ದರು.

ಈ ಮರದ ಆಭರಣಗಳ ಇನ್ನೊಂದು ವೈಶಿಷ್ಟ್ಯ ಎಂದರೆ ಇವುಗಳ ಮೇಲೆ ಯಾವುದೇ ತರಹದ ಬಣ್ಣ ಕೂಡ ಗಟ್ಟಿಯಾಗಿ ನಿಲ್ಲುತ್ತದೆ. ಇದನ್ನೇ ಅಸ್ತ್ರವಾಗಿ ಬಳಸಿಕೊಂಡ ಫ್ಯಾಷನಿಸ್ಟಗಳು ಇದೀಗ ಸಾಕಷ್ಟು ವಿವಿಧ ವಿನ್ಯಾಸ, ರೂಪ, ಬಣ್ಣಗಳನ್ನು ಉಪಯೋಗಿಸಿ ಮರದ ಆಭರಣಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಈ ಮರದ ತುಂಡಿನ ಆಭರಣಗಳು ಸಾಂಪ್ರದಾಯಿಕ ಉಡುಪಿಗೂ ಸೈ ಹಾಗೇ ಆಧುನಿಕ ಉಡುಪಿಗೂ ಸೈ ಎನಿಸಿಕೊಂಡಿವೆ. ಯಾವುದೇ ತರದ ಉಡುಪು ಧರಿಸಿದಾಗಲೂ ಮರದ ಆಭರಣ ಚೆನ್ನಾಗಿ ಒಪ್ಪುತ್ತದೆ. ಉಡುಪಿನೊಂದಿಗೆ 'ಮಿಕ್ಸ್ ಅಂಡ್ ಮ್ಯಾಚ್' ಕೂಡ ಮಾಡಿಕೊಳ್ಳಬಹುದು.

ಚಿಕ್ಕ ಮರದ ತುಂಡಿನಲ್ಲಿ ತಯಾರಿಸಲಾದ ಕಿವಿಯೋಲೆಗಳಲ್ಲಿನ ಸೂಕ್ಷ್ಮ ಕೆತ್ತನೆಗಳು ಎಲ್ಲರ ಗಮನಸೆಳೆಯುತ್ತಿವೆ. ಹಾಗೇ ಈ ಕಿವಿಯೋಲೆಗಳು ಕಡಿಮೆ ತೂಕ ಹೊಂದಿದ್ದು ಇದನ್ನು ಧರಿಸಿದವರಿಗೆ ಕಿವಿ ನೋವಾಗುವ ಸಮಸ್ಯೆಯೇ ಇಲ್ಲ. ಹಾಗೇ ನೂಲು, ಮಣಿ, ಹ್ಯಾಂಗಿಂಗ್ ಒಳಗೊಂಡಂತೆ ತೀರ ವಿಭಿನ್ನ ಮಾದರಿಯಲ್ಲಿ ಇವುಗಳನ್ನು ರಚಿಸಲಾಗಿದೆ. ಸಾಂಪ್ರದಾಯಿಕ ಉಡುಪುಗಳಾದ ಸೀರೆ, ಲೆಹಂಗಾ, ಗಾಗ್ರಾ ಮುಂತಾದ ಉಡುಪುಗಳ ಜೊತೆಗೆ ಸ್ವಲ್ಪ ದೊಡ್ಡ ಗಾತ್ರದ ದೇವಿ, ದೇವತೆಯರ ಚಿತ್ರ ಬಿಡಿಸಿ, ಬಣ್ಣ ತುಂಬಿರುವ ಹ್ಯಾಂಗಿಂಗ್ಸ್ ಧರಿಸಬಹುದು.

ಶುಭ ಸಮಾರಂಭಗಳಿಗೆ ಅನುಗುಣವಾಗಿ ಮತ್ತು ಆ ಸಮಾರಂಭಕ್ಕೆ ಧರಿಸುವ ನಿಮ್ಮ ಉಡುಪಿಗೆ ಅನುಗುಣವಾಗಿ ಗ್ರ್ಯಾಂಡ್ ಲುಕ್ ನೀಡುವ ಇಯರಿಂಗ್ಸ್ ಧರಿಸಬಹುದು. ಹಾಗೇ ನಿಮ್ಮ ಉಡುಪು ಸಿಂಪಲ್ಲಾಗಿದ್ದರೆ ಸಿಂಪಲ್ಲಾಗಿರುವ ಮರದ ಕಿವಿಯೋಲೆ ಧರಿಸಬಹುದು.

ಇನ್ನು ಮಾಡರ್ನ್ ಉಡುಪುಗಳಾದ ಜೀನ್ಸ್, ಮಿಡಿ, ಲಾಂಗ್ ಸ್ಕರ್ಟ್ ಮೇಲೆ ರೇನ್ ಡ್ರಾಪ್, ರಿಂಗ್ ಮಾದರಿಯ ಎರಡು ಮೂರು ಸುತ್ತುಗಳ ಶೈಲಿಯ ಕಿವಿಯೋಲೆ ಚೆನ್ನಾಗಿ ಒಪ್ಪುತ್ತದೆ.

ಕಿವಿಯೋಲೆ ಖರೀದಿಸುವ ಮುಂಚೆ ಅದು ನಿಮ್ಮ ಮುಖಕ್ಕೆ ಹೊಂದಿಕೊಳ್ಳುವಂತಿದ್ದರೆ ಮಾತ್ರ ಖರೀದಿಸಿ, ಇಲ್ಲವೇ ನೀವು ಎಷ್ಟೆ ದುಬಾರಿ ಬೆಲೆ ತೆತ್ತು ಕೊಂಡರೂ ಅದು ನಿಮ್ಮ ಮುಖಕ್ಕೆ ಸೂಟ್ ಆಗದಿದ್ದರೆ ಅದನ್ನು ಖರೀದಿಸಿ ವ್ಯರ್ಥ. ಅದಕ್ಕಾಗಿ ಮೊದಲೇ ಸೂಕ್ತ ರೀತಿಯಲ್ಲಿ ಆಯುಕೊಳ್ಳಬೇಕು.

## ಕೆಲವೊಂದು ಟಿಪ್ಸ್

- ಮೊದಲು ನಿಮ್ಮ ಮುಖದ ಆಕಾರ ಯಾವುದೆಂದು ತಿಳಿದುಕೊಳ್ಳಿ.
- ಚಿಕ ಮುಖವುಳ್ಳವರಿಗೆ ಚಿಕ್ಕ ಕಿವಿಯೋಲೆ ಚೆನ್ನಾಗಿ ಒಪ್ಪುತ್ತದೆ.
- ಉದ್ದ ಮುಖವುಳ್ಳವರು ಸ್ವಲ್ಪ ದೊಡ್ಡದಾದ ಉದ್ದವಾದ ಕಿವಿಯೋಲೆ ಬಳಸಿದರೆ ಒಳ್ಳೆಯದು.
- ಯಾವುದೇ ಕಿವಿಯೋಲೆ ಚನ್ನಾಗಿದೆ ಎಂದು ಕೊಳ್ಳುವ ಮೊದಲು ನಿಮಗೆ ಹೊಂದುತ್ತದೋ ಇಲ್ಲವೋ ಎಂದು ತಿಳಿದುಕೊಂಡು ಖರೀದಿಸಿ.